ಎ-72-(154)

**ಮಾನ್ಯ ಶ್ರೀ ಪ್ರಕಾಶ್ ಕೆ ರಾಥೋಡ, ವಿಧಾನ ಪರಿಷತ್ತಿನ ಸದಸ್ಯರು ಇವರು ನಿಯಮ 330 ರಡಿ ಮಂಡಿಸಿರುವ ಈ ಕೆಳಕಂಡ ಗಮನ ಸೆಳೆಯುವ ಸೂಚನೆಗೆ ಮಾನ್ಯ ತೋಟಗಾರಿಕೆ ಮತ್ತು ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರ ಉತ್ತರ**

**ಉತ್ತರ : "ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿಯಲ್ಲಿ ಪರದೆಮನೆ ನಿರ್ಮಿಸಲು ರಾಜ್ಯ ಸರ್ಕಾರ ಅನುಮೋದನೆ ನೀಡಲಾಗಿದ್ದು, ಇದುವರೆಗೂ ಫಲಾನುಭವಿಗಳಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರದ ವತಿಯಿಂದ ಬಿಡುಗಡೆಯಾಗಬೇಕಾದ ಅನುದಾನ ಎಷ್ಟು ಹಾಗೂ ಬಿಡುಗಡೆ ಮಾಡದೇ ಇರುವುದರಿಂದ ರೈತರಿಗೆ ತೊಂದರೆಯಾಗುತ್ತಿರುವ ಬಗ್ಗೆ"**

ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ಕೇಂದ್ರ ಸರ್ಕಾರದ ಪಾಲುದಾರಿಕೆ ಶೇ.60 ರಷ್ಟು ಮತ್ತು ರಾಜ್ಯ ಸರ್ಕಾರದ ಪಾಲು ಶೇ.40 ರಷ್ಟು ಇರುತ್ತದೆ. ಈ ಯೋಜನೆಯಡಿ ಹಸಿರುಮನೆ ಮತ್ತು ನೆರಳುಪರದೆ ಘಟಕ ನಿರ್ಮಿಸಲು ರೈತರಿಗೆ ಪ್ರತಿ ಚ.ಮೀ. ಗೆ ಕ್ರಮವಾಗಿ ರೂ. 420.00 ಮತ್ತು ರೂ.197.00ಗಳ ಸಹಾಯಧನವನ್ನು 4000 ಚ.ಮೀ ವರೆಗೆ ನೀಡಲಾಗುತ್ತಿದೆ.

ಸಾಮಾನ್ಯ ವರ್ಗದ ಫಲಾನುಭವಿಗಳಿಗೆ ಶೇ. 50ರಷ್ಟು ಸಹಾಯಧನ ಮತ್ತು ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಶೇ. 90 ರಷ್ಟು ಸಹಾಯಧನವನ್ನು ನೀಡಲಾಗಿದೆ. ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ನೀಡಬೇಕಾದ ಸಹಾಯಧನ ಶೇ.50 ರಷ್ಟು ಇದ್ದರೂ ರಾಜ್ಯ ಸರ್ಕಾರದಿಂದ ಶೇ.40ರಷ್ಟು (Top up) ಹೆಚ್ಚಿನ ಸಹಾಯಧನವನ್ನು ಎಂದರೆ ಒಟ್ಟು ಶೇ 90 ರಷ್ಟು ಸಹಾಯಧನವನ್ನು ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ನೀಡಲಾಗಿದೆ. ಈ ಬಾಬ್ತು ಸಹಾಯಧನವನ್ನು ರಾಜ್ಯವಲಯ ಯೋಜನೆಯಾದ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ಭರಿಸಲಾಗಿದೆ.

2019-20ನೇ ಸಾಲಿನಲ್ಲಿ ಶೇ.40 ರಷ್ಟು ಹೊಂದಾಣಿಕೆ ಮೊತ್ತದ (Top up) ಅನುದಾನ ಕೊರತೆಯಿಂದಾಗಿ ಎಲ್ಲಾ ಫಲಾನುಭವಿಗಳಿಗೆ ಸಹಾಯಧನ ನೀಡಿರುವುದಿಲ್ಲ. ಈ ರೀತಿ 958 ಫಲಾನುಭವಿಗಳಿಗೆ Top up ಸಹಾಯಧನ ನೀಡುವುದು ಬಾಕಿ ಇರುತ್ತದೆ.

2020-21ನೇ ಸಾಲಿನಲ್ಲಿ Top up ಸಹಾಯಧನ ನೀಡಲು ಯೋಜಿಸಲಾಗಿದ್ದ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ಲಭ್ಯವಿದ್ದ ಸಂಪೂರ್ಣ ಅನುದಾನವನ್ನು ಕೋವಿಡ್-19 ಕಾರಣ ಹೂ, ಹಣ್ಣು ಮತ್ತು ತರಕಾರಿ ಬೆಳೆಗಾರರಿಗೆ ಪರಿಹಾರಧನ ವಿತರಿಸಲು ಬಳಸಲಾಗಿದೆ. ಈ ಸಾಲಿನಲ್ಲಿ 2763 ಸಂಖ್ಯೆಯ ಪರಿಶಿಷ್ಟ ಜಾತಿ ಮತ್ತು 1439 ಸಂಖ್ಯೆಯ ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಒಟ್ಟು 4202 ಸಂಖ್ಯೆ ಫಲಾನುಭವಿಗಳಿಗೆ Top up ಸಹಾಯಧನವನ್ನು ನೀಡಲಾಗಿರುವುದಿಲ್ಲ.

2021-22ನೇ ಸಾಲಿನಲ್ಲಿ ಮತ್ತು ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಶೇ. 90 ರಷ್ಟು ಸಹಾಯಧನವನ್ನು ನೀಡಲು ತೀರ್ಮಾನಿಸಲಾಗಿದ್ದು, ಈ ಬಾಬ್ತು Top up ನೀಡಲು ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಹೆಚ್ಚಿನ ರಾಜ್ಯಪಾಲಿನ ಅನುದಾನದ ಅವಶ್ಯಕತೆ ಇರುತ್ತದೆ.

| ವರ್ಷ | ಫಲಾನುಭವಿಗಳ ಸಂಖ್ಯೆ | | ಒಟ್ಟು | Top up ಅನುದಾನ (ರೂ. ಲಕ್ಷಗಳಲ್ಲಿ) |
|---|---|---|---|---|
| | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | | |
| 2019-20 | | 958 | 958 | 817.32 |
| 2020-21 | 2763 | 1439 | 4202 | 3569.03 |
| 2021-22 | 6449 | 5362 | 11811 | 2949.72 |
| ಒಟ್ಟು | 9212 | 7759 | 16971 | 7336.07 |

ಈ ಅನುದಾನವನ್ನು ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಒದಗಿಸುವಂತೆ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿದ್ದು ಪರಿಶೀಲನೆಯಲ್ಲಿದೆ.

**No. HORTI 600 HGM 2021**

(ಮುನಿರತ್ನ)

ತೋಟಗಾರಿಕೆ ಹಾಗೂ ಯೋಜನೆ

ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು